1961–62ರಲ್ಲಿ 15,700 ಟನ್‌ನಷ್ಟು ಮೀನು ಹೊರದೇಶಗಳಿಗೆ ರಫ್ತಾಗುತ್ತಿತ್ತು. ಈಗ ಐದು ಲಕ್ಷ ಟನ್ ಮೀನು ರಫ್ತಾಗುತ್ತಿದ್ದು, 5185 ಕೋಟಿ ರೂಪಾಯಿ ವಿದೇಶಿ ವಿನಿಮಯ ನಮಗೆ ದೊರೆಯುತ್ತಿರುವುದಕ್ಕೆ ವಿಜ್ಞಾನದ ಕೊಡುಗೆಯೇ ಆದ ನೀರಿನಾಳದಲ್ಲಿ ನಡೆದ ಎರಡನೆಯ 'ನೀಲಕ್ರಾಂತಿ'ಯೇ ಕಾರಣ. ನಾವೀಗ ವಾರ್ಷಿಕ 11,49,341 ಟನ್‌ನಷ್ಟು ಸಮುದ್ರ ಆಹಾರವನ್ನು ರಫ್ತು ಮಾಡುತ್ತಿದ್ದು, ಅದರ ಮೌಲ್ಯ 43,717 ಕೋಟಿ ರೂಪಾಯಿಗಳಷ್ಟಿದೆ.



### ಬೆಳ್ಳಿಕ್ರಾಂತಿ

'ಬೆಳ್ಳಿಕ್ರಾಂತಿ' ಆಭರಣಲೋಕದ ಲೋಹ ಬೆಳ್ಳಿಗೆ ಸಂಬಂಧಪಟ್ಟದ್ದಲ್ಲ. ಕೋಳಿ ಮೊಟ್ಟೆ ಉತ್ಪಾದನೆಯಲ್ಲಿ ಆದ ಕ್ರಾಂತಿಯನ್ನು 'ಬೆಳ್ಳಿಕ್ರಾಂತಿ' ಎನ್ನುತ್ತೇವೆ. 1965ರಲ್ಲಿ ಪ್ರಾರಂಭವಾಗಿ ಸುಮಾರು 9 ವರ್ಷಗಳ ಕಾಲ ಕುಕ್ಕುಟ ಕೃಷಿಯಲ್ಲಿ ಆಧುನಿಕ ವೈದ್ಯ ವಿಜ್ಞಾನಗಳ ಸಹಾಯದಿಂದ ಉಂಟಾದ ಬದಲಾವಣೆಯಿಂದಾಗಿ, ಕೋಳಿ ಮೊಟ್ಟೆ ಉತ್ಪಾದನೆಯಲ್ಲಿ ಭಾರತವನ್ನು ವಿಶ್ವದ ಮೂರನೇ ದೊಡ್ಡ ರಾಷ್ಟ್ರವನ್ನಾಗಿ ಮಾಡಿದ ಹೆಗ್ಗಳಿಕೆ 'ನೆಲ್ಲರ್ ಕ್ರಾಂತಿ'ಗೆ ಸಲ್ಲುತ್ತದೆ.

ಖಾಸಗಿ ಕಂಪನಿಗಳ ಜೊತೆ ಕೈಜೋಡಿಸಿ ಹೈಬ್ರಿಡ್ ತಳಿಯ ಕೋಳಿ, ಹುಂಜಗಳನ್ನು ಸೃಷ್ಟಿಸಿ, ಎಪ್ಪತ್ತರ ದಶಕದಲ್ಲಿ ಎದುರಾಗಿದ್ದ ಮೊಟ್ಟೆ ಬಿಕ್ಕಟ್ಟನ್ನು ಯಶಸ್ವಿಯಾಗಿ ಪರಿಹರಿಸಲಾಯಿತು.

ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ದೂರದರ್ಶಿ ಯೋಜನೆಯ ಫಲವಾಗಿ ಪೌಲ್ಟ್ರಿ ಉದ್ಯಮಕ್ಕೆ ಕಾಯಕಲ್ಪ ಲಭಿಸಿತು. ಪರಿಸ್ಥಿತಿಯ ಅಗತ್ಯವನ್ನರಿತ ತೆಲಂಗಾಣದ ಆಧುನಿಕ ಪೌಲ್ಟ್ರಿ ಕೃಷಿಕ ಬಂದಾವಾಸುದೇವ ರಾವ್ ಭಾರತದ ಪೌಲ್ಟ್ರಿ ಉದ್ಯಮಕ್ಕೆ ಆಧುನಿಕ ಜೈವಿಕ ತಂತ್ರಜ್ಞಾನದ ಸ್ಪರ್ಶ ನೀಡಿ ಉದ್ಯಮದ ಚಹರೆಯನ್ನೇ ಬದಲಾಯಿಸಿದರು. ಅವರ ಕೊಡುಗೆಯನ್ನು ಗುರುತಿಸಿದ ಕೇಂದ್ರ ಸರ್ಕಾರ ರಾವ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ.

1968ರಲ್ಲಿ 160 ಕೋಟಿ ಮೊಟ್ಟೆಗಳನ್ನು ಉತ್ಪಾದಿಸಿದ್ದ ನಾವು, ಕಳೆದ ಏಪ್ರಿಲ್‌ನಲ್ಲಿ ಹತ್ತು ಸಾವಿರ ಕೋಟಿ ಕೋಳಿ ಮೊಟ್ಟೆ ಉತ್ಪಾದಿಸಿ ದಾಖಲೆ ಬರೆದಿದ್ದೇವೆ. ಸದ್ಯ ಭಾರತದ ಪೌಲ್ಟ್ರಿ ಉದ್ಯಮದ ಒಟ್ಟು ಮೌಲ್ಯ 2 ಲಕ್ಷ ಕೋಟಿ ರೂ ತಲುಪಿದೆ. 2026ಕ್ಕೆ ಅದು 47 ಲಕ್ಷ ಕೋಟಿಯಾಗಲಿದೆ ಎಂಬ ಅಂದಾಜಿದೆ.

### ನಸು ಗುಲಾಬಿ ಕ್ರಾಂತಿ

ಔಷಧ ಕ್ಷೇತ್ರದಲ್ಲಿ ಭಾರತದ ಸಾಧನೆಯನ್ನು 'ನಸುಗುಲಾಬಿ ಕ್ರಾಂತಿ' (Pink Revolution) ಎನ್ನಲಾಗುತ್ತದೆ.

ಸ್ವಾತಂತ್ರ್ಯ ಬಂದಾಗ ಆಧುನಿಕ ಔಷಧ ವಿಜ್ಞಾನ ತಂತ್ರಜ್ಞಾನ ನಮ್ಮಲ್ಲಿ ಅಸ್ತಿತ್ವದಲ್ಲಿರಲೇ ಇಲ್ಲ. ಅಲ್ಲೊಂದು ಇಲ್ಲೊಂದು ಸಂಶೋಧನೆ ನಡೆಯುತ್ತಿತ್ತಷ್ಟೇ. ಅದರಿಂದಾಗಿ ಔಷಧಿಗಳು ಸುಲಭ ಬೆಲೆಯಲ್ಲಿ ಸಿಗುತ್ತಿರಲಿಲ್ಲ. ದೇಸೀಯ ವೈದ್ಯಪದ್ಧತಿ ಮತ್ತು ಮನೆಮದ್ದುಗಳನ್ನೇ ಬಹುತೇಕ ಅವಲಂಬಿಸಿದ್ದ ಜನತೆ ಈ ಕ್ಷೇತ್ರದ ಸಾಧನೆಗಳಿಗೆ ಸ್ಪಂದಿಸಿದ್ದು ತುಸು ನಿಧಾನವಾಗಿ. ಈಗ ವಿಶ್ವದಲ್ಲಿ ಅತ್ಯಂತ ಕಡಿಮೆ ಬೆಲೆಗೆ ಅತ್ಯಾಧುನಿಕ ಜೀವರಕ್ಷಕ ಔಷಧಗಳನ್ನು ತಯಾರಿಸುವಲ್ಲಿ ಭಾರತ ಅಗ್ರಸ್ಥಾನದಲ್ಲಿದೆ. ಅವಶ್ಯಕತೆಗಿಂತ ಹೆಚ್ಚು ಔಷಧ ಉತ್ಪಾದನೆ ಮಾಡುತ್ತಿರುವ ಭಾರತ ಜನಸಂಖ್ಯೆ ಮತ್ತು ರೋಗ ನಿಯಂತ್ರಣಗಳಲ್ಲಿ ಗಣನೀಯ ಕೊಡುಗೆ ನೀಡಿದೆ. ಕಾಡುತ್ತಿರುವ ಕೊರೊನಾ ಎದುರಿಸಲು ಒಂದೇ ವರ್ಷದ ಅವಧಿಯಲ್ಲಿ ಎರಡು ಶಕ್ತಿಯುತ ಲಸಿಕೆ ಸೃಷ್ಟಿಸಿದ ನಾವು ಹಲವು ದೇಶಗಳಿಗೆ ರಫ್ತು ಮಾಡುವಲ್ಲಿ ಯಶಸ್ವಿಯಾಗಿದ್ದೇವೆ.


ಹಸಿರುಕ್ರಾಂತಿಗೆ ಜೀವ ತುಂಬಿದ ಎಂ.ಎಸ್. ಸ್ವಾಮಿನಾಥನ್

### ಪಿಂಕ್ ರೆವಲ್ಯೂಶನ್-2

ಮಾಂಸ ಮತ್ತು ಪೌಲ್ಟ್ರಿ ಉದ್ಯಮಗಳ ಉತ್ಪನ್ನವನ್ನು ಹೆಚ್ಚಿಸಲು ಕೈಗೊಂಡ ಸಮರೋಪಾದಿ ಕೆಲಸಗಳ ಫಲವನ್ನೇ 'ಎರಡನೇ ಪಿಂಕ್ ರೆವಲ್ಯೂಶನ್' ಎನ್ನುತ್ತಾರೆ.